			ಭರಿಸಲಾದ ವೆಚ್ಚ (ರೂ.)
1)	ಮುಖ್ಯಮಂತ್ರಿಗಳು	2 ಬಾರಿ	1,42,245.00
2)	ಉಪ ಮುಖ್ಯಮಂತ್ರಿಗಳು	2 ಬಾರಿ	59,125.00
3)	ಬಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು	3 ಬಾರಿ	1,45,442.00
4)	ಗಣಿ ಮತ್ತು ಭೂ ವಿಜ್ಞಾನ ಸಚಿವರು	1 ಬಾರಿ	89,000.00
5)	ಕೃಷಿ ಸಚಿವರು	1 ಬಾರಿ	44,700.00
6)	ತೋಟಗಾರಿಕೆ ರಾಜ್ಯ ಸಚಿವರು	1 ಬಾರಿ	55,000.00
7)	ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು	1 ಬಾರಿ	30,385.00
8)	ಯುವಜನ ಸೇವಾ ಮತ್ತು ಕ್ರೀಡಾರಾಜ್ಯ ಸಚಿವರು	1 ಬಾರಿ	-

ಇ) ಮತ್ತು ಈ) ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಬಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು ತಮ್ಮ ಪ್ರವಾಸದಲ್ಲಿ ಕೈಗಾರಿಕೆ, ಪ್ರವಾಸೋದ್ಯಮ, ವಿದ್ಯುತ್, ಕೃಷಿ ಹಾಗೂ ನೀರಾವರಿ ಇತ್ಯಾದಿಗಳ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ವಿದೇಶಿ ಬಂಡವಾಳವನ್ನು ಆಕರ್ಷಿಸುವ ಬಗ್ಗೆ ವಿದೇಶಿ ಕೈಗಾರಿಕೋದ್ಯಮಿಗಳೊಂದಿಗೆ ಮಾತುಕತೆ ನಡಿಸಿದ್ದು, ಇದರ ಫಾಲೋ ಅಪ್ ಕ್ರಮವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಮಾಡುತ್ತಲಿವೆ. ಕೃಷಿ ಸಚಿವರು ಹಾಗೂ ತೋಟಗಾರಿಕೆ ರಾಜ್ಯ ಸಚಿವರ ಇಸ್ರೇಲ್ ಪ್ರವಾಸವು ಒಣಕೃಷಿ, ತೋಟಗಾರಿಕೆಯಲ್ಲಿ ಮಾಡಿರುವ ಪ್ರಗತಿಯನ್ನು ಅಧ್ಯಯಿಸಿದ್ದು, ಈ ಪದ್ಧತಿಯನ್ನು ಈ ರಾಜ್ಯದಲ್ಲೂ ಅಳವಡಿಸಿಕೊಳ್ಳುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳು ಪರಿಶೀಲಿಸುತ್ತಿವೆ. ಗಣಿ ಮತ್ತು ಭೂ ವಿಜ್ಞಾನ ಸಚಿವರ ವಿದೇಶಿ ಪ್ರವಾಸದಿಂದಾಗಿ ರಾಜ್ಯ ಸರ್ಕಾರದ ಅಧೀನದಲ್ಲಿರುವ ಮೈಸೂರು ಮಿನರಲ್ಸ ಕಂಪೆನಿಯ ರೂಪಾಯಿ 19.65 ಕೋಟಿ ಮಾರಾಟದ ವಹಿವಾಟನ್ನು ಪಡೆದಿರುತ್ತದೆ. 1996ರಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವ ಬಗ್ಗೆ ಅಧ್ಯಯಿಸಲು ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ವಿದೇಶ ಪ್ರವಾಸ ಕೈಗೊಂಡಿದ್ದರು.

ತುಂಗಾ ಮೇಲ್ದಂಡೆ ಯೋಜನೆ ಕುರಿತು.

2219- ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *1994-95ನೇ ಸಾಲಿನಲ್ಲಿ ನೀರಾವರಿ ಯೋಜನೆಗಳಿಗೆ ನಿಗದಿ ಪಡಿಸಿದ್ದು ಗುರಿ ಎಷ್ಟು ಬಿಡುಗಡೆ ಮಾಡಿದ ಹಣ ಎಷ್ಟು, ಖರ್ಚಾದ ಹಣ ಎಷ್ಟು ಪ್ರತಿಯೊಂದು ನೀರಾವರಿ ಯೋಜನೆಗಳ ಬಗ್ಗೆ ವಿವರ ನೀಡುವುದು).*

ಆ) ಅಪ್ಪರ್ ತುಂಗಾ ಯೋಜನೆಗೆ 1994-95ನೇ ಸಾಲಿಗೆ ಖರ್ಚು ಮಾಡಿದ ಹಣದಲ್ಲಿ ಯಾವ ಯಾವ ಕೆಲಸಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ (ಇದರಲ್ಲಿ ಅಭಿವೃದ್ಧಿಗೆ ಹಾಗೂ ಆಡಳಿತಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ).

ಇ) 1995-96ನೇ ಸಾಲಿನಲ್ಲಿ ನೀರಾವರಿ ಯೋಜನೆಗಳಿಗೆ ನಿಗದಿಪಡಿಸಿದ್ದ ಆರ್ಥಿಕ ಗುರಿ ಎಷ್ಟು, 31.8.95 ರೊಳಗೆ ಬಿಡುಗಡೆ ಮಾಡಿದ ಹಣ ಎಷ್ಟು ಹಾಗೂ ಖರ್ಚಾದ ಹಣ ಎಷ್ಟು (ಪ್ರತಿಯೊಂದು ಯೋಜನೆಯ ಬಗ್ಗೆ ವಿವರವನ್ನೊದಗಿಸುವುದು).

ಈ) 1995-96ನೇ ಸಾಲಿನಲ್ಲಿ ಅಪ್ಪರ್ ತುಂಗಾ ಯೋಜನೆಗೆ 31.8.96ರೊಳಗೆ ಯಾವ ಯಾವ ಕೆಲಸಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ. (ಕಾಮಗಾರಿಯ ವಿವರ ನೀಡುವುದು)?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಅನುಬಂಧ-1 ರಲ್ಲಿ ವಿವರಗಳನ್ನು ನೀಡಲಾಗಿದೆ.

ಆ) ಅಪ್ಪರ್ ತುಂಗಾ ಯೋಜನೆಗೆ 1994-95ನೇ ಸಾಲಿನಲ್ಲಿ ರೂ. 238.18 ಲಕ್ಷಗಳನ್ನು ಈ ಕೆಳಕಂಡಂತೆ ಖರ್ಚು ಮಾಡಲಾಗಿದೆ. ಇದರಲ್ಲಿ

			ಲಕ್ಷ ರೂ.ಗಳಲ್ಲಿ
1)	ಆಡಳಿತ ಮತ್ತು ಸುಧಾರಣೆ	:	96.05
2)	ಡ್ಯಾಂ ಮತ್ತು ಸಂಬಂಧಿಸಿದ ಕೆಲಸಗಳು	:	7.65
3)	ಕೆನಾಲ್ ಮತ್ತು ಉಪಕಾಲುವೆಗಳು	:	9.48
4)	ಕಟ್ಟಡಗಳು	:	68.87
5)	ಯಂತ್ರ ಮತ್ತು ಸಾಮಗ್ರಿಗಳು	:	23.52
6)	ಅಮಾನತ್ತು ಮತ್ತು ಇತರೆ	:	32.61
	ಒಟ್ಟು	:	238.18

ಇ) ಅನುಬಂಧ -1 ರಲ್ಲಿ ವಿವರಗಳನ್ನು ನೀಡಲಾಗಿದೆ.

ಈ) ಅಪ್ಪರ್ ತುಂಗಾ ಯೋಜನೆಗೆ 1995-96ನೇ ಸಾಲಿನಲ್ಲಿ 31.8.95ರವರೆಗೆ ರೂ. 92.41 ಲಕ್ಷಗಳನ್ನು ಈ ಕೆಳಕಂಡಂತೆ ಖರ್ಚು ಮಾಡಲಾಗಿದೆ.

			ಲಕ್ಷ ರೂ.ಗಳಲ್ಲಿ
1)	ಆಡಳಿತ ಮತ್ತು ಸುಧಾರಣೆ	:	63.12
2)	ಡ್ಯಾಂ ಮತ್ತು ಸಂಬಂಧಿಸಿದ ಕೆಲಸಗಳು	:	4.85
3)	ಕಾಲುವೆಗಳು ಮತ್ತು ಉಪಕಾಲುವೆಗಳು	:	70.30
4)	ಕಟ್ಟಡಗಳು	:	21.79
5)	ಮೆಷನರಿ ಮತ್ತು ಯಂತ್ರಗಳು	:	4.01
6)	ಅಮಾನತ್ತು ರೂ.(-)	:	71.66
	ಒಟ್ಟು	:	92.41

ಕೃಷ್ಣಾ ಜಲಾನಯನ ಹಾಗೂ ಕಾವೇರಿ ಜಲಾನಯನ ಪ್ರದೇಶಗಳು

2220 - ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ) :ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ 20 ವರ್ಷಗಳಿಂದ ಕರ್ನಾಟಕದ ಭಾಗದಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ತಮಿಳುನಾಡಿಗೆ ಹರಿಯಬಿಟ್ಟ ನೀರಿನ ಪ್ರಮಾಣವೆಷ್ಟು (ಸಂಪೂರ್ಣ ವಿವರ ಒದಿಗುಸುವುದು)

ಆ) ಅಗತ್ಯಕ್ಕಿಂತ ಹೆಚ್ಚು ನೀರು ತಮಿಳುನಾಡಿಗೆ ಹಾಗಿದ್ದರೆ ಅದನ್ನು ಸಂಗ್ರಹಿಸುವ ಮತ್ತು ಆ ನೀರನ್ನು ನಮ್ಮ ರಾಜ್ಯದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಹರಿಸುವ ಬಗ್ಗೆ ಸರ್ಕಾರದ ಮುಂದೆ ಯೋಜನೆಯೇನಾದರೂ ಇದೆಯೇ.

ಇ) ಹಾಗಿಲ್ಲದಿದ್ದರೆ, ಕುಡಿಯುವ ನೀರಿಗೂ ತೊಂದರೆ ಇದ್ದು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರುವ ಕಳ್ಳಂಬೆಳ್ಳ ಮತ್ತು ಬೋರನ ಕಣಿವೆ ಜಲಾಶಯ ಮತ್ತು ಮಾರಿಕಣಿವೆ ಜಲಾಶಯಗಳಿಗೆ ನೀರು ಒದಗಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್. ಡಿ ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ತಮಿಳುನಾಡಿ ಗಡಿಭಾಗದ ಬಿಳಿಗುರಿಡ್ಲುವಿನ ಸಮೀಪ ಕೇಂದ್ರ ಜಲ ಆಯೋಗವು ಮಾಡುತ್ತಿರುವ ಗೇಜಿಂಗ್ ಆಧಾರದ ಮೇಲೆ ಕಳೆದ 20 ವರ್ಷಗಳಲ್ಲಿ ತಮಿಳುನಾಡಿಗೆ ಹರಿದಿರುವ ನೀರಿನ ಪ್ರಮಾಣ ಈ ಕೆಳಕಂಡಂತಿದೆ.